**ದಿಃ14.06.2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಮುಖ್ಯವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಈ ದಿನ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಮಜಕೂರುಗಳು ಸತ್ಯವಾಗಿರುತ್ತವೆ.

ನ್ಯಾಯಾಲಯಕ್ಕೆ ನಾನು ಹಾಜರು ಪಡಿಸಿರುವ ದಾಖಲೆಗಳನ್ನು ನನ್ನ ಪರವಾಗಿ ಗುರುತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಆದಾಯ ತೆರಿಗೆ ಇಲಾಖೆಯವರು ಕೊಟ್ಟ 6 ಸ್ವೀಕೃತಿ ಪತ್ರಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಡಿ-1 ರಿಂದ 6 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಮೆಸೆರ್ಸ ಟಿ.ಬಿ. ಲೆಂಗಡೆ ಅಂತ ಅಸೆಸ್ಸಿ ಇರುತ್ತಾರೆ, ಇದನ್ನು ಭರಮಪ್ಪ ಭರ್ತಿ ಮಾಡಿರುತ್ತಾರೆ, ಸಹಿಯನ್ನು ನಿಡಿ-1(ಎ) ಎಂದು, ನಿಡಿ-2 ರಿಂದ 6 ರಲ್ಲಿ ತನ್ನ ಸಹಿಗಳು ಇರುವುದನ್ನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-2(ಎ) ದಿಂದ ನಿಡಿ-6(ಎ) ಎಂದು ಗುರುತಿಸಲಾಯಿತು. ಪಾಲುದಾರಿಕೆ ಸಂಸ್ಥೆಯ ವಿಸರ್ಜನಾ ಪತ್ರದ ಜರಾಕ್ಸ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ಗುರುತಿಸಲು ಪ್ರತಿವಾದಿ ಪರ ವಕೀಲರು ಕೇಳಿರುತ್ತಾರೆ ವಾದಿ ಪರ ವಕೀಲರು ಅದು ಜರಾಕ್ಸ ಪ್ರತಿ ಇದ್ದ ಕಾರಣ ಗುರುತಿಸಲು ಬರುವುದಿಲ್ಲ ಎಂದು ತಕರಾರನ್ನು ಸಲ್ಲಿಸಿರುತ್ತಾರೆ ಆದಕಾರಣ ಸದರಿ ದಾಖಲೆಯ ಮೇಲೆ ವಾದ ಮಂಡನೆಗಾಗಿ ಸಮಯಾವಕಾಶ ಕೇಳಿರುತ್ತಾರೆ.

**(ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.